ಮೈಸೂರ ಗಜೆಟ್ಟು.

ಸಂ. 42.] ಸರ್ಕಾರದಿಂದ ಪ್ರಾಯುಷ್ಯ ಆದ್ದು. [ನಂ. 9.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 28, ಸನ್ 1907.

II ನೆ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಕ್ಕಾದ ಇಸ್ತಿಹಾರ್ನಾಮೆಗಳು.

ಕೊಡಗು ಚೀಫ್ ಕಮಿಷನರವರಿಂದ ಕೊಡೋಕ್ಕಾದ.

ಇಸ್ತಿಹಾರ್ನಾಮೆ.

ಬೆಂಗಳೂರು ದರಜಾಗ್ಯಾ, ತಾರೀಖು 29ನೆ ಜನವರಿ 1907ನೆ ಇಸವಿ.

ನಂ. 13. ಮುಂಚೆ ಜಾರಿಯಲ್ಲಿದ್ದ ಪದ್ಧತಿಯನ್ನು ರದ್ದುಪಡಿಸಿ ಈ ಮೂಲಕ್ಕೆವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1907ನೆ ಇಸವಿ ಏಪ್ರೆಲ್ ತಾರೀಖು 1ರ ಲ್ಹಾಗಾಯ್ತು 1908ನೆ ಇಸವಿ ಮಾರ್ಚಿ ತಾರೀಖು 31ರ ವರಿಗೆ ಕೊಡಗು ಶೀಮೆಯಲ್ಲಿ ಆಫೀವನ್ನು, ಆಫೀವಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತಗಿಯುವ ದಕ್ಕೋಸ್ಕರ ಉಪಯೋಗಿಸಲ್ಪಡುವ ಆಫೀಮಿನಿಂದ ತಯಾರಾದ ಅಥವಾ ವಿಶ್ರವಾದ ಪದಾರ್ಥಗಳಲ್ಲದ ಇನ್ನಿತರ ತಯಾರಾದ ನಿಷ್ಠಾವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ಮೇರಿಗೆ ಹರಾಜು ಮಾಡಲ್ಪಡುವದು.

(i) 1907ನೆ ಇಸವಿ ಮಾರ್ಚಿ 8ನೆ ತಾರೀಖಿನಲ್ಲಿ ಮಡಿಕೇರಿಯಲ್ಲಿ ಮಡಿಕೇರಿ ತಾಲ್ಲೂಕು ಸುಬೇದಾರರ ಮುಂದೆ.

(ii) 1907ನೆ ಇಸವಿ ಮಾರ್ಚಿ 6ನೆ ತಾರೀಖಿನಲ್ಲಿ ವೀರರಾಜಪೇಟೆಯಲ್ಲಿ ಯೆಡಿನಾಲ್ಕ್‌ನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1907ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡೆಗು ಕಮಿಷನರವರ ಮುಂಜೂರಾತಿಗೆ ವಳಪಟ್ಟಿರುತ್ತದೆ. ಅವರು ಯಾವ ಕಾರಣವೂ ನಮೂದಿಸದೆ ಚಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲಾ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಲಗನ್ನು ಕೊಟ್ಟದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋ ಗಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. 80 ತೊಲದ ಕೇರಿಗೆ 20 ರೂಪಾಯಿ ಮೇರಿಗೆ ಕಮಿಷನರವರಿಂದ ಲೈಸೆನ್ಸುದಾರನಿಗೆ ಆಫೀಂ ಕೊಡಲ್ಪಡುತ್ತೆ.

5. 80 ತೊಲದ ಕೇರಿಗೆ ಬಂದೇ ಬೆಲೆಯಾಗಿ 45 ರೂಪಾಯಿ ಮೇರಿಗೆ ಆಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು ಅವು ಯಾವವಂದರೆ:—

ಮಡಿಕೇರಿಯಲ್ಲಿ ಒಂದು.

ವೀರರಾಜಪೇಟೆಯಲ್ಲಿ ಒಂದು.

ಗೋಣಿಕೊಪ್ಪಲ್ಲಿ ಒಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಎಫ್. ಪಿ. ರೆನ್ನಿ,
ಚೀಫ್ ಕಮಿಷನರವರ ಸೆಕ್ರೆಟರಿಯವರು.